**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 615/2021**

| | | |
|---|---|---|
| ಹೆಸರು | ಜಯಪ್ಪ | ಪಿಡಬ್ಲ್ಯೂ – 02<br>ಸಿಡಬ್ಲ್ಯೂ – 03 |
| ತಂದೆಯ ಹೆಸರು | ಹನುಮಂತಪ್ಪ | |
| ವಯಸ್ಸು | 45 ವರ್ಷ | |
| ಉದ್ಯೋಗ | ಖಾಸಗಿ ಕೆಲಸ | ದಿ: 07.09.2023 |
| ವಾಸ ಸ್ಥಳ | ಹಳೇಹರ್ಲಾಪುರ, ಹರಿಹರ | |
| ಮುಖ್ಯ ವಿಚಾರಣೆ | ಸಹಾಯಕ ಸರ್ಕಾರಿ ಅಭಿಯೋಜಕರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಚಾಸಾ–1 ಮತ್ತು 2ರವರ ಪರಿಚಯವಿದೆ. ಈಗ ನೋಡುತ್ತಿರುವ ನಿಪಿ–2ರಲ್ಲಿ ನನ್ನ ಸಹಿ ಇದೆ, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರು ನಿಪಿ–3ರ ಪೋಟೋದಲ್ಲಿ ನಾನು ಇದ್ದೇನೆ. ಈಗ ಸುಮಾರು 2–3 ವರ್ಷಗಳ ಹಿಂದೆ ಹಳೇಹರ್ಲಾಪುರ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿನ ಗಂಟೆ, ಲಿಂಗದ ಕಾಯಿ ಮತ್ತು ಹಣದ ಹುಂಡಿ ಕಳ್ಳತನವಾಗಿದ್ದು, ಆ ವಿಚಾರವಾಗಿ ಪೊಲೀಸರು ನನ್ನನ್ನು ಸ್ಥಳಕ್ಕೆ ಕರೆಸಿದ್ದು, ಆ ಸಮಯದಲ್ಲಿ ನಿಪಿ–3ರಂತೆ ಪೋಟೋ ತೆಗೆಸಿ, ನಿಪಿ–2ಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀಮತಿ ಎಸ್ ಪಿ ಎಸ್ ವಕೀಲರಿಂದಃ**

2. ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನನಗೆ ಯಾವುದೇ ನೋಟೀಸ್ ನೀಡಿರಲಿಲ್ಲ. ನಿಪಿ–2ರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ನನಗೆ ಓದಲು ಬರುವುದಿಲ್ಲ. ಪೊಲೀಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ನಾನು ಸಹಿ ಹಾಕಿರುತ್ತೇನೆ. ಪೊಲೀಸರು ದೇವಸ್ಥಾನದ ಹತ್ತಿರ ಪೋಟೋ ತೆಗೆಸಿಕೊಳ್ಳಲು ಹೇಳಿದ್ದರಿಂದ ನಾನು ನಿಂತುಕೊಂಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎನ್ ಎಲ್ ವಕೀಲರಿಂದಃ**

ಶ್ರೀ ಎನ್ ಎಲ್ ವಕೀಲರು 1 ನೇ ಆರೋಪಿಯ ಪಾಟೀ ಸವಾಲನ್ನು 2 ಮತುತ 3 ನೇ ಆರೋಪಿತರ ಪರ ಪಾಟೀ ಸವಾಲನ್ನಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿದ್ದರಿಂದ ವಿನಂತಿ ಮೇರೆಗೆ ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.